ಹೋಗಿದ್ದವು. ಕೆಲದಿನಗಳ ನಂತರ ಮನಸ್ಸನ್ನು ಗಟ್ಟಿಮಾಡಿಕೊಂಡ ತೆಂಗಿನಕಾಯಿಗೆ ಬಾವಿಯ ತಳದಲ್ಲಿ ಮೆತ್ತನೆಯ ಮಣ್ಣು ಸೊಂಪಾದ ತರಗೆಲೆಯ ಗೊಬ್ಬರ ಸಿಕ್ಕಿತು. ತನಗೆ ಸಿಕ್ಕಿರುವ ಸಂಪನ್ಮೂಲಗಳಿಂದಲೇ ತನ್ನ ಪೋಷಣೆ ಮಾಡಿಕೊಳ್ಳಲು ನಿರ್ಧರಿಸಿದ ತೆಂಗಿನಕಾಯಿ ನಿಧಾನವಾಗಿ ಟಿಸಿಲೊಡೆಯಿತು. ನಂತರ ಬಂದ ಒಂದೆರಡು ಮಳೆಗಳು ಬಾವಿಗಿಳಿದು ತೆಂಗಿನಸಸಿಗೆ ಉಪಚರಿಸಿತು. ತರಗೆಲೆಯ ಗೊಬ್ಬರ ಹಸಿಮಣ್ಣು ಸಿಕ್ಕ ಮೇಲೆ ತೆಂಗಿನ ಗರಿಗಳು ಮೂಡಿ ನಿಧಾನವಾಗಿ ಗಿಡವಾಯಿತು ಆದರೆ ಮಟಮಟ ಮಧ್ಯಾಹ್ನದವರೆಗೂ ಸೂರ್ಯನ ಬಿಸಿಲು ಬಾವಿಯ ತಳದಲ್ಲಿರುವ ಸಸಿಗೆ ತಾಗುತ್ತಿರಲಿಲ್ಲ. ತನಗೆ ದೊರಕಿದಷ್ಟು ಬೆಳಕಿನಲ್ಲಿ ದ್ಯುತಿಸಂಶ್ಲೇಷಣೆ ಕ್ರಿಯೆ ನಡೆಸಿ ವೇಗವಾಗಿ ಬೆಳೆದ ತೆಂಗಿನ ಸಸಿ ಮುಂದಿನ ಕೆಲವೇ ವರ್ಷಗಳಲ್ಲಿ ಸುಮಾರು ಹನ್ನೆರಡು ಅಡಿಗಳಷ್ಟು ಎತ್ತರಕ್ಕೆ ಬೆಳೆಯಿತು. ಇನ್ನೂ ಏಳೆಂಟು ಅಡಿಗಳಷ್ಟು ಎತ್ತರಕ್ಕೆ ಬೆಳೆದರೆ ಹೊರಜಗತ್ತನ್ನು ನೋಡುವ ಅವಕಾಶ ಈ ಗಿಡಕ್ಕಿತ್ತು.

ಮುಂದಿನ ಕೆಲವರ್ಷಗಳಲ್ಲಿ ಸುರಿದ ಉತ್ತಮ ಮಳೆ ಹಾಗೂ ತರಗೆಲೆ ಗೊಬ್ಬರದಿಂದ ಉತ್ಕೃಷ್ಟವಾಗಿ ಬೆಳೆದ ತೆಂಗಿನ ಗಿಡ ನೋಡನೋಡುತ್ತಿದ್ದಂತೆ ಬಾವಿಯ ತಳದಿಂದ ಮೇಲೆದ್ದು ಬಂದು ಹೊರಜಗತ್ತನ್ನು ನೋಡುವ ಹಂತಕ್ಕೆ ಬೆಳೆಯಿತು. ತನ್ನಿಷ್ಟದಂತೆ ನೂರಾರು ಕಾಯಿಗಳನ್ನು ಹತ್ತಾರು ವರ್ಷಗಳವರೆಗೆ ಹೊರುತ್ತಾ ಬದುಕಿದ ಆ ಮರ ಆಗಾಗ ಬೀಸುವ ಬಿರುಗಾಳಿಗೆ ತಲೆಬಗ್ಗಿಸಿ ಧನ್ಯವಾದ ಹೇಳುತ್ತಿತ್ತು ಏಕೆಂದರೆ ಅಂದು ಗೊನೆಯಿಂದ ಬೇರ್ಪಟ್ಟ ಕಾಯಿಗಳಲ್ಲಿ ಬಾವಿಗೆ ಬಿದ್ದ ಈ ಕಾಯಿಮಾತ್ರ ಗಿಡವಾಗಿ ಮರವಾಗಿ ಬೆಳೆಯಲು ಸಾಧ್ಯವಾಗಿತ್ತು. ಬಾವಿಯ ಹೊರಗಿನ ಪ್ರಪಂಚದಲ್ಲಿ ಬಿದ್ದಿದ್ದ ಕಾಯಿಗಳನ್ನು ಜನ ಎತ್ತಿಕೊಂಡು ಹೋಗಿ ಅಡುಗೆಗೆ ಬಳಸಿದ್ದರು ಇನ್ನೂ ಕೆಲವು ಕಾಯಿಗಳು ಟಿಸಿಲೊಡೆದರೂ ಸೂಕ್ತ ಉಪಚಾರ ದೊರೆಯದೇ ಸ್ವಲ್ಪ ಸಮಯದಲ್ಲೇ ಅಸುನೀಗಿದ್ದವು. ನಮ್ಮೊಳಗೆ ಮಹತ್ವಾಕಾಂಕ್ಷೆ ಇದ್ದರೆ ಎಂತಹ ಪರಿಸ್ಥಿತಿಯಲ್ಲೂ ಸಹ ನಮ್ಮ ಜೀವನದ ಗುರಿಯನ್ನು ಸಾಧಿಸಲು ಸಾಧ್ಯವೆಂದು ತೆಂಗಿನಮರಕ್ಕೆ ಮನದಟ್ಟಾಯಿತು. ■



# ಅಮ್ಮನ ಕೋಪ ಎಲ್ಲಿಯವರೆಗೆ?

■ **ರಾಜಶೇಖರ ಕುಕ್ಕುಂದಾ**

ಕಲೆ: ಸಂತೋಷ್ ಸಸಿಹಿತ್ಲು

ಅಮ್ಮನ ಕೋಪ ಎಲ್ಲಿಯವರೆಗೆ?
ಬಾನಲಿ ಸೂರ್ಯ ಇಣುಕುವವರೆಗೆ

ಅಮ್ಮನ ಕೋಪ ಎಲ್ಲಿಯವರೆಗೆ?
ತಮ್ಮನು ರಾಗವ ನಿಲಿಸುವವರೆಗೆ

ಅಮ್ಮನ ಕೋಪ ಎಲ್ಲಿಯವರೆಗೆ?
ಅಕ್ಕನು ಶಾಲೆಗೆ ಹೋಗುವವರೆಗೆ

ಅಮ್ಮನ ಕೋಪ ಎಲ್ಲಿಯವರೆಗೆ?
ಮನೆಯಲಿ ಕೆಲಸ ಮುಗಿಯುವವರೆಗೆ

ಅಮ್ಮನ ಕೋಪ ಎಲ್ಲಿಯವರೆಗೆ?
ಅಪ್ಪನು ಬಂದು ರಮಿಸುವವರೆಗೆ! ■







**ಧ್ರುವ್ ವಿಸ್ಮಯ್**
2ನೇ ತರಗತಿ, ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಬೆಂಗಳೂರು

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ. **ವಿಳಾಸ:** editorsu@sudha.co.in